ಓ.ಎಸ್. ನಂಃ 72/2021

ಪಿ.ಡಬ್ಲ್ಯೂಃ 1

**ದಿನಾಂಕ 11.02.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಃ ಶ್ರೀ.ಸಿ.ಎಲ್.ಎಂ. ವಕೀಲರಿಂದಃ**

5. ನಾನು ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಮಿರ್ಲೆಯ ಉಪನೊಂದಣಾಧಿಕಾರಿಗಳ ಕಚೇರಿಯಿಂದ ಪಡೆದಿರುತ್ತೇನೆ. ದಾವಾ ಐಟಂ ನಂ.1 ರ 21 ಗುಂಟೆ ಜಮೀನನ್ನು ನನ್ನ ತಾಯಿಯವರು ಅಪ್ಪಾಜಿಗೌಡರಿಂದ ದಿನಾಂಕ 29.06.2002 ರಂದು ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಆದ್ದರಿಂದ ದಾವಾ ಐಟಂ ನಂ.1 ರ 21 ಗುಂಟೆ ಜಮೀನು ನನ್ನ ತಾಯಿಯವರ ಸ್ವರ್ಯಾಜಿತ ಆಸ್ತಿ ಎಂದರೆ ಸರಿ. ದಾವಾ ಐಟಂ ನಂ.1 ರ ಇನ್ನೊಂದು 21 ಗುಂಟೆ ಜಮೀನು ನನ್ನ ತಂದೆಗೆ ಸೇರಿದ ಆಸ್ತಿ ಎಂದರೆ ಸರಿ.

6. ದಾವಾ ಐಟಂ ನಂ.4 ರ ಆಸ್ತಿಯು ನನ್ನ ತಂದೆಗೆ ಯಾರಿಂದ ಮತ್ತು ಯಾವ ಮೂಲದಿಂದ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.4 ರ ಆಸ್ತಿಯನ್ನು ದಿನಾಂಕ 13.05.1993 ರಲ್ಲಿ ಡಿಮ್‌ಡಿಮ್ ಶಂಕರ ಎನ್ನುವವರು ಸುರೇಶರವರಿಂದ ಖರೀದಿಸಿದ ಆಸ್ತಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ಡಿಮ್‌ಡಿಮ್ ಶಂಕರ ರವರು ನನ್ನ ತಂದೆಯ ಸ್ವಂತ ತಮ್ಮ. ಸದರಿ ಡಿಮ್‌ಡಿಮ್ ಶಂಕರ ರವರ ಒಪ್ಪಿಗೆಯ ಮೇರೆಗೆ ದಾವಾ ಐಟಂ ನಂ.4 ರ ಆಸ್ತಿಯು ನಿಮ್ಮ ತಂದೆಯ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ದಾವಾ ಐಟಂ ನಂ.4 ರ ಆಸ್ತಿಯು ನನ್ನ ತಂದೆಯ ಆಸ್ತಿ ಎಂದು ನುಡಿದಿರುತ್ತಾರೆ.

7. ನಮ್ಮ ವಿದ್ಯಾಭ್ಯಾಸ ಮತ್ತು ವಿವಾಹವನ್ನು ನನ್ನ ತಂದೆಯವರೆ ಮಾಡಿಸಿರುತ್ತಾರೆ ಎಂದರೆ ಸರಿ. ನಮ್ಮ ವಿದ್ಯಾಭ್ಯಾಸದ ಖರ್ಚು ಹಾಗೂ ನಮ್ಮ ವಿವಾಹದ ಖರ್ಚಿಗಾಗಿ ಪಡೆದ ಸಾಲಗಳನ್ನು ತೀರಿಸುವ ಉದ್ದೇಶದಿಂದ ದಾವಾ ಆಸ್ತಿಗಳನ್ನು ಪ್ರತಿವಾದಿ ಸಂಖ್ಯೆ 1 ರಿಂದ 4 ರವರು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಒಪ್ಪಿಗೆ ಇಲ್ಲದೆ 1 ರಿಂದ 4 ನೇ ಪ್ರತಿವಾದಿಯರು 5 ನೇ ಪ್ರತಿವಾದಿಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದು ಸ್ವತಃ

ನುಡಿದಿರುತ್ತಾರೆ. ನಮ್ಮ ವಿದ್ಯಾಭ್ಯಾಸದ ಖರ್ಚು ಹಾಗೂ ನಮ್ಮ ವಿವಾಹದ ಖರ್ಚಿಗಾಗಿದಾವಾ ಆಸ್ತಿಗಳನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ದಾವಾ ಆಸ್ತಿಗಳನ್ನು ಮಾರಾಟ ಮಾಡುವ ಪೂರ್ವದಲ್ಲಿಯೇ ನನ್ನ ವಿದ್ಯಾಭ್ಯಾಸ ಮುಗಿದಿದ್ದು, 2 ನೇ ಪ್ರತಿವಾದಿಯ ವಿವಾಹದ ಖರ್ಚಿಗೆ ನಮಗೆ ಹಣದ ಅಡಚಣೆ ಇದಿದ್ದ ಕಾರಣ ನಾವು ನಮ್ಮ ಕೆಲವು ಆಸ್ತಿಗಳನ್ನು ಮಾರಾಟ ಮಾಡಲು ಯೋಚಿಸಿದ್ದೇವು ಎಂದು ಸಾಕ್ಷಿಯು ನುಡಿದಿರುತ್ತಾರೆ.

8. ದಾವಾ ಆಸ್ತಿಗಳನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡುವ ಕಾಲಕ್ಕೆ 1 ನೇ ಪ್ರತಿವಾದಿ ನಮ್ಮ ವಿದ್ಯಾಭ್ಯಾಸ ಮತ್ತು ವಿವಾಹದ ಖರ್ಚಿಗೆ ಕೈಸಾಲಗಳನ್ನು ಮಾಡಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು 5 ನೇ ಪ್ರತಿವಾದಿಯ ಸ್ವಾಧೀನ ಮತ್ತು ಮಾಲೀಕತ್ವದಲ್ಲಿದೆ ಎಂದರೆ ಸರಿ. ದಾವಾ ಆಸ್ತಿಗಳ ಖಾತೆಯು ಸಹ 5 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ದಾವಾ ಆಸ್ತಿಗಳನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ ದಾವಾ ಆಸ್ತಿಗಳು ನಮ್ಮ ಕುಟುಂಬದ ಸ್ವಾಧೀನದಲ್ಲಿಲ್ಲ ಎಂದರೆ ಸರಿ. ನಮ್ಮ ಕುಟುಂಬದ ಕಾನೂನು ಬದ್ದ ಅಗತ್ಯಗಳಿಗಾಗಿ ದಾವಾ ಆಸ್ತಿಗಳನ್ನು 1 ರಿಂದ 4 ಪ್ರತಿವಾದಿಯರು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಕಾರಣ ದಾವಾ ಆಸ್ತಿಗಳಲ್ಲಿ ನನಗಾಗಲೀ ಅಥವಾ 1 ರಿಂದ 4 ನೇ ಪ್ರತಿವಾದಿಯರಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

9. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನಾನು ಯಾವುದೇ ನ್ಯಾಯ ಪಂಚಾಯಿತಿಕೆಯನ್ನು ಮಾಡಿಸಿರುವುದಿಲ್ಲ. ದಾವಾ ಆಸ್ತಿಗಳನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ 5-6 ತಿಂಗಳುಗಳ ನಂತರದಲ್ಲಿಯೇ ನನಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡಿರುವ ವಿಷಯ ಗೊತ್ತಾಗಿರುತ್ತದೆ. ದಾವಾ ಆಸ್ತಿಗಳನ್ನು ಮಾರಾಟ ಮಾಡಿ ಬಂದ ಹಣವನ್ನು ನಮ್ಮ ಕುಟುಂಬದ ಕಾನೂನುಬದ್ದ ಅವಶ್ಯಕತೆಗಾಗಿ ಉಪಯೋಗಿಸಿ ಈಗ ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**